**ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.**

ಸಿ.ಸಿ. ನಂಬರ 12/2020

ಸಿಡಬ್ಲ್ಯೂ- 7/ಪಿಡಬ್ಲ್ಯೂ-4

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರೇಣಪ್ಪ |
| ತಂದೆ ಹೆಸರು | ಃ | ನಾಗಪ್ಪ ಕೊಮ್ಮರಸಿಕೊಪ್ಪ |
| ವಯಸ್ಸು | ಃ | 38 ವರ್ಷ |
| ವೃತ್ತಿ | ಃ | ರೈತಾಪಿ |
| ವಾಸ್ತವ್ಯ | ಃ | ಮುದ್ದಿನಕೊಪ್ಪ, ಶಿಗ್ಗಾಂವ ತಾ. |

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 17-03-2025.

**ಮುಖ್ಯ ವಿಚಾರಣೆಃ ಮಾನ್ಯ ಎ.ಪಿ.ಪಿ. ರವರಿಂದಃ**

ನಾನು ಮುಂಡಗೋಡಿನಿಂದ ದೇವರ ಕಾರ್ಯಕ್ರಮಕ್ಕೆ ಊರಿಗೆ ಹೊರಟ್ಟಿದ್ದೆ. ಆಗ ಪರಮೇಶಿಯವರಿಗೆ ಅಪಘಾತವಾಗಿರುತ್ತದೆ ಎಂದು ನಮ್ಮ ಊರಿನವರು ನನಗೆ ಕರೆ ಮೂಲಕ ತಿಳಿಸಿದರು. ದಿಃ 14-03-2019 ರಂದು ಘಟನೆ ಸಂಭವಿಸಿರುತ್ತದೆ. ಮೃತ ವ್ಯಕ್ತಿ ನನಗೆ ಅಣ್ಣನಾಗಬೇಕು. ನಾನು ಘಟನಾ ಸ್ಥಳಕ್ಕೆ ಹೋದ ನಂತರ ನನ್ನ ಅಣ್ಣನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು. ಆಸ್ಪತ್ರೆಯಲ್ಲಿ ಶವ ಪಂಚನಾಮೆಯನ್ನು ಜರುಗಿಸಿ, ಛಾಯಚಿತ್ರವನ್ನು ತೆಗೆದಿರುತ್ತಾರೆ. ಈ ಪ್ರಕರಣದ ಬಗ್ಗೆ ನನಗೆ ಇಷ್ಟು ಮಾತ್ರ ತಿಳಿದಿರುತ್ತದೆ. ನಾನು ಯಾರ ಮುಂದೆ ಯಾವ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಸಾಕ್ಷಿಯು ಶವಪಂಚನಾಮೆ ಜರುಗಿಸುವ ಕಾಲಕ್ಕೆ ತೆಗೆದ 2 ಛಾಯಚಿತ್ರಗಳನ್ನು ನೋಡಿ ಗುರುತಿಸಿದ್ದು, ಸದರಿ 2 ಛಾಯಚಿತ್ರಗಳನ್ನು ಅನುಕ್ರಮವಾಗಿ ನಿಪಿ 4 ಮತ್ತು 5 ಎಂದು ಗುರುತಿಸಲಾಯಿತು.

**(ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎ.ಪಿ.ಪಿ. ರವರು ಕೋರಿದ ಮೇರೆಗೆ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಮಾನ್ಯ ಎಪಿಪಿ ರವರಿಂದ.**

ಘಟನೆ ಯಾವ ರೀತಿ ಸಂಭವಿಸಿರುತ್ತದೆ ಎಂದು ನಾನು ಚಾಸಾ1 ರವರಿಂದ ಕೇಳಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಆ ರೀತಿಯಾಗಿ ನಾನು ಪೊಲೀಸರ ಮುಂದೆ ಹೇಳಿಕೆಯನ್ನೂ ಸಹ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿದ್ದರೂ ಸಹಿತ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿಃ 15-03-2019 ರಂದು ಪೊಲೀಸರ ಮುಂದೆ ನೀಡಿದ ಹೇಳಿಕೆಯನ್ನು **ನಿಪಿ6** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎ ಎನ್., ವಕೀಲರಿಂದಃ**

ನಾನು ಘಟನಾ ಸ್ಥಳಕ್ಕೆ ಹೋಗಿದ್ದೆನು. ಘಟನಾ ಸ್ಥಳದ ಹತ್ತಿರ ಕರ್ವಿಂಗ್ ಇದೆ ಎಂದರೆ ಸರಿ. ಘಟನಾ ಸ್ಥಳದಲ್ಲಿ ಮೃತ ದೇಹವು ರಸ್ತೆಯ ಬಲಗಡೆ ಇತ್ತು. ಅಪಘಾತ ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

**ಓ .ಹೇ.ಕೇ. ಸರಿ ಇದೆ**

**-Sd-**

**ಪ್ರ.ದ.ನ್ಯಾ.ದಂ. ಮುಂಡಗೋಡ.**